**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ಇವರು ನಿಯಮ-72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-**

**ಪ್ರಶ್ನೆ:**

ಕರ್ನಾಟಕ ರಾಜ್ಯದ ಪೌರಾಡಳಿತ ಮತ್ತು ನಗರಾಡಳಿತ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳಾಗಿ ಸೇವೆ ಸಲ್ಲಿಸುತ್ತಿರುವ (ನಗರಾಡಳಿತ) ಸದಸ್ಯರುಗಳ ಗೌರವಧನ (ಹೆಚ್ಚಳ) ಮತ್ತು ಸಿಟ್ಟಿಂಗ್ ಫೀಸ್ ಹೆಚ್ಚಳ ಮಾಡುವ ಕುರಿತು.

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ:ನಅಇ 156 ಎಂಎಲ್ಆರ್ 2015 ದಿನಾಂಕ 15-09-2016ರ ರೀತ್ಯ ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರರು/ ಉಪ ಮಹಾಪೌರರು/ ಅಧ್ಯಕ್ಷ/ಉಪಾಧ್ಯಕ್ಷ ಮತ್ತು ಸದಸ್ಯರುಗಳ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವಧನವನ್ನು ಈ ಕೆಳಕಂಡಂತೆ ಕೆಳಕಂಡ ಷರತ್ತಿಗೊಳಪಟ್ಟು ಪರಿಷ್ಕರಿಸಿ ಆದೇಶಿಸಿದೆ:

| ಕ್ರ ಸಂ | ಹುದ್ದೆ | ಪರಿಷ್ಕೃತ ಗೌರವಧನ (ರೂ. ಗಳಲ್ಲಿ) |
|---|---|---|
| | **ಮಹಾನಗರಪಾಲಿಕೆ** | |
| 1. | ಮಹಾಪೌರರು | 16,000/- |
| 2. | ಉಪ ಮಹಾಪೌರರು | 10,000/- |
| 3. | ಸದಸ್ಯರು | 6,000/- |
| 4. | ಸ್ಥಾಯಿ ಸಮಿತಿ ಸದಸ್ಯರು | 400/-<br>(ಮಾಸಿಕ ರೂ. 800-00 ಮೀರದಂತೆ) |
| | **ನಗರಸಭೆಗಳು** | |
| 1. | ಅಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 12,000/- |
| 2. | ಉಪಾಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 8,000/- |
| 3. | ಸದಸ್ಯರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 4,000/- |
| 4. | ಅಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 8,000/- |
| 5. | ಉಪಾಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 4,000/- |
| 6. | ಸದಸ್ಯರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 2,000/- |
| 7. | ಸ್ಥಾಯಿ ಸಮಿತಿ ಸದಸ್ಯರು | 400/-<br>(ಮಾಸಿಕ ರೂ.800-00 ಮೀರದಂತೆ) |
| | **ಪುರಸಭೆಗಳು** | |
| 1. | ಅಧ್ಯಕ್ಷರು | 4,800/- |
| 2. | ಉಪಾಧ್ಯಕ್ಷರು | 2,400/- |
| 3. | ಸದಸ್ಯರು | 1,200/- |
| 4. | ಸ್ಥಾಯಿ ಸಮಿತಿ ಸದಸ್ಯರು | 300/-<br>(ಮಾಸಿಕ ರೂ.600-00 ಮೀರದಂತೆ) |

| ಪಟ್ಟಣ ಪಂಚಾಯಿತಿ | | |
|---|---|---|
| 1. | ಅಧ್ಯಕ್ಷರು | 3,200/- |
| 2. | ಉಪಾಧ್ಯಕ್ಷರು | 1,600/- |
| 3. | ಸದಸ್ಯರು | 800/- |
| 4. | ಸ್ಥಾಯಿ ಸಮಿತಿ ಸದಸ್ಯರು | 200/-<br>(ಮಾಸಿಕ ರೂ.400-00 ಮೀರದಂತೆ) |

**ಷರತ್ತುಗಳು:**

(1) ಈ ಗೌರವಧನದ ವೆಚ್ಚವನ್ನು ಆಯಾಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದ ಭರಿಸಿಕೊಳ್ಳತಕ್ಕದ್ದು, ಸರ್ಕಾರದಿಂದ ಈ ಬಗ್ಗೆ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ;

(2) ಸ್ಥಾಯಿ ಸಮಿತಿ ಸದಸ್ಯರು, ಪ್ರತಿ ತಿಂಗಳಿಗೆ ಗರಿಷ್ಠ ಎರಡು ಸಭೆಯ ಭತ್ಯೆಗೆ ಮಾತ್ರ ಅರ್ಹರಿರುತ್ತಾರೆ;

(3) ಮುಂದಿನ ಐದು ವರ್ಷದವರೆಗೆ ಗೌರವಧನವನ್ನು / ಭತ್ಯೆಗಳನ್ನು ಹೆಚ್ಚಿಸುವ ಅಥವಾ ಪರಿಷ್ಕರಿಸುವ ಬಗ್ಗೆ ಪರಿಗಣಿಸುವಂತಿಲ್ಲ.

ಗೌರವಧನ ಹೆಚ್ಚಳ ಮಾಡುವ ಬಗ್ಗೆ ಪರಿಶೀಲಿಸಲಾಗಿ, ಸರ್ಕಾರದ ದಿನಾಂಕ 15-09-2016ರ ಆದೇಶದನ್ವಯ ಹಾಲಿ ಗೌರವಧನ ಪಾವತಿಸುತ್ತಿರುವ ಅವಧಿಯು 5 ವರ್ಷ ಪೂರ್ಣಗೊಂಡಿದ್ದು, ಈ ಗೌರವಧನವನ್ನು ಪರಿಷ್ಕರಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು.

**ಸಂಖ್ಯೆ: ನಅಇ 27 ಎಲ್‌ಸಿಕ್ಯೂ 2022**

(ಎನ್. ನಾಗರಾಜು ಎಂ.ಟಿ.ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು.